ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

**(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)**

**E-Mail :-** ka.chikkaballapur.dudc@gmail.com **Ph:-** 08156-295230

ಸಂಖ್ಯೆ:ಜಿನಕೋ/ಚಿಸಿ(2)/ಸಿ.ಆರ್/384/2025-26 ದಿನಾಂಕ:- 28-04-2026

## ಅಧಿಸೂಚನೆ

**ವಿಷಯ** ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿಯಡಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016, ದಿನಾಂಕ: 07.08.2017
2. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 126 ಟಿಎಂಎಸ್ 2016, ದಿನಾಂಕ: 04.07.2017 ಮತ್ತು 05.12.2017.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 176 ಜಿಇಎಲ್ 2022(ಭಾಗ-2) (ಇ) ದಿನಾಂಕ:23.11.2022 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 171 2022 ಎಂಎನ್ಇ 2022 (ಇ) ದಿನಾಂಕ:23.11.2022.
4. ಆರ್ಥಿಕ ಇಲಾಖೆಯ ಅನುಮೋದನೆ ದಿನಾಂಕ:07.09.2021.
5. ಸರ್ಕಾರದ ಪತ್ರದ ಸಂಖ್ಯೆ: ನಅಇ 108 ಜಿಇಎಲ್ 2021 (ಇ), ದಿನಾಂಕ:07.08.2025 ಹಾಗೂ ದಿನಾಂಕ:12.11.2025.
6. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಸುತ್ತೋಲೆ ಪತ್ರದ ಸಂಖ್ಯೆ:513641/DMA/EST2/OTH/8/2021 ದಿನಾಂಕ:18.11.2025.

*-*-*-*-*-*

ಉಲ್ಲೇಖ(1) ರಿಂದ (6)ರ ಆದೇಶಗಳಂತೆ, ಚಿಕ್ಕಬಳ್ಳಾಪುರ ಜಿಲ್ಲಾ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ, ಮತ್ತು ಗೌರಿಬಿದನೂರು ಗಳಲ್ಲಿ ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಪೌರಕಾರ್ಮಿಕ, ಲೋಡರ್ಸ್, ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್ ಹಾಗೂ ಹೆಲ್ಪರ್ಸ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ನೇರಪಾವತಿಗೆ ಪರಿಗಣಿಸಲು ಆಸಕ್ತಿವುಳ್ಳ ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

### ಸೂಕ್ತ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕಾಲಮಿತಿ

| ವಿವರ | ದಿನಾಂಕ | ಅರ್ಜಿ ನಮೂನೆ ಪಡೆಯುವ ಮತ್ತು ದಾಖಲೆಗಳೊಂದಿಗೆ ಸಲ್ಲಿಸುವ ವಿಳಾಸ |
|---|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ | 01.05.2026 | ನಗರಸಭೆ.ಚಿಕ್ಕಬಳ್ಳಾಪುರ/ಚಿಂತಾಮಣಿ/ ಶಿಡ್ಲಘಟ್ಟ/ಗೌರಿಬಿದನೂರು |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 30.05.2026 | |

| ಲಭ್ಯವಿರುವ ಹುದ್ದೆಗಳು | ಕನಿಷ್ಠ ವಿದ್ಯಾರ್ಹತೆ |
|---|---|
| ನೇರ ಪಾವತಿಯಡಿ ಭರ್ತಿ ಮಾಡಬೇಕಾದ ಒಟ್ಟು ಹುದ್ದೆಗಳ ಸಂಖ್ಯೆ:-**169** | ಕನ್ನಡ ಮಾತನಾಡಲು ಬರಬೇಕು<br>ಕನಿಷ್ಠ 18 ವರ್ಷ, ಗರಿಷ್ಠ ವಯೋಮಿತಿ 50 ವರ್ಷದೊಳಗಿರಬೇಕು. |

**ಹುದ್ದೆಗಳ ವರ್ಗೀಕರಣ:**

| ಕ್ರ.ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಹುದ್ದೆಯ ವಿವರ | 2024ನೇ ಸಾಲಿನ ಅಂತ್ಯಕ್ಕೆ ಇರುವ ಜನಸಂಖ್ಯೆಗೆ ಅನುಗುಣವಾಗಿ ಪ್ರತಿ 700 ಜನಸಂಖ್ಯೆಗೆ 01 ಪೌರಕಾರ್ಮಿಕರಂತೆ ಲಭ್ಯವಾಗುವ ಹುದ್ದೆಗಳ ಸಂಖ್ಯೆ | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ (ಖಾಯಂ ಮತ್ತು ನೇರಪಾವತಿ) | ನೇರಪಾವತಿ ಅಡಿಯಲ್ಲಿ ಭರ್ತಿ ಮಾಡಲು ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ನಗರಸಭೆ, ಚಿಕ್ಕಬಳ್ಳಾಪುರ | ನೇರ ಪಾವತಿ ಪೌರಕಾರ್ಮಿಕರ | 117 | ಖಾಯಂ-38<br>ನೇರ ಪಾವತಿ-30<br>ಒಟ್ಟು-68 | 28 |
| 2 | ನಗರಸಭೆ, ಚಿಂತಾಮಣಿ | | 165 | ಖಾಯಂ-42<br>ನೇರ ಪಾವತಿ-24<br>ಒಟ್ಟು-66 | 59 |
| 3 | ನಗರಸಭೆ, ಶಿಡ್ಲಘಟ್ಟ | | 103 | ಖಾಯಂ-38<br>ನೇರ ಪಾವತಿ-16<br>ಒಟ್ಟು-54 | 36 |
| 4 | ನಗರಸಭೆ, ಗೌರಿಬಿದನೂರು | | 100 | ಖಾಯಂ-42<br>ನೇರ ಪಾವತಿ-4<br>ಒಟ್ಟು-46 | 46 |
| **ನೇರಪಾವತಿ ಅಡಿಯಲ್ಲಿ ಭರ್ತಿ ಮಾಡಲು ಖಾಲಿ ಇರುವ ಹುದ್ದೆಗಳ ಒಟ್ಟು ಸಂಖ್ಯೆ** | | | | | **169** |

**ಪರಿಗಣನೆಯ ಅಂಶಗಳು:**

1. ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಈ ಹಿಂದೆ ಹೊರಗುತ್ತಿಗೆ/ ದಿನಗೂಲಿ/ ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಪೌರಕಾರ್ಮಿಕ, ಲೋಡರ್ಸ್, ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್ ಹಾಗೂ ಹೆಲ್ಪರ್ಸ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ/ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡುವುದು. (ಕಾರ್ಯ ನಿರ್ವಹಿಸಿದ ಅವಧಿಗೆ ESI/ PF/ ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ಅಥವಾ ಹಾಜರಾತಿ ದಾಖಲೆಗಳನ್ನು ಪಡೆಯುವುದು).
2. ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ/ ದಿನಗೂಲಿ/ ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್-19 ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ಮರಣ ಹೊಂದಿದ ಪೌರಕಾರ್ಮಿಕರ ಕುಟುಂಬದ ಒಬ್ಬ ಸದಸ್ಯರನ್ನು ನೇರಪಾವತಿಯಡಿ ನೇಮಕ ಮಾಡಿಕೊಳ್ಳಲು ಪರಿಗಣಿಸುವುದು.
3. ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್, ಹೆಲ್ಪರ್ಸ್ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸಿ ಅನುಭವವುಳ್ಳ ಸ್ಥಳೀಯ ಸ್ವಚ್ಛತಾ ಕೆಲಸಗಾರರನ್ನು ಪರಿಗಣಿಸುವುದು. (ಕಾರ್ಯನಿರ್ವಹಿಸಿದ ಅವಧಿಗೆ ESI/PF/ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ಅಥವಾ ಹಾಜರಾತಿ ದಾಖಲೆಗಳನ್ನು ಪಡೆಯುವುದು)
4. ಮ್ಯಾನುಯಲ್ ಸ್ಕ್ಯಾವೆಂಜರ್ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ಥರುಗಳಿಗೆ ಅಥವಾ ಅವರ ಕುಟುಂಬದ ಸದಸ್ಯರಿಗೆ (ಗಂಡ, ಹೆಂಡತಿ, ಮಗ/ ಮಗಳು) ಒಟ್ಟು ಖಾಲಿ ಇರುವ ಹುದ್ದೆಗಳ ಪೈಕಿ ಶೇ.10 ರಷ್ಟು ಹುದ್ದೆಗಳನ್ನು ಮೀಸಲಿಡುವುದು. ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದಲ್ಲಿ ಸದರಿ ಹುದ್ದೆಗಳನ್ನು ಇತರೆ ವರ್ಗಗಳಿಂದ ಭರ್ತಿ ಮಾಡಲು ಕ್ರಮವಹಿಸುವುದು ಹಾಗೂ ಸದರಿ ನೇಮಕಾತಿ ಪ್ರಕ್ರಿಯೆಯು ಮೀಸಲಾತಿಗೆ ಅನ್ವಯಿಸುವುದಿಲ್ಲ (ಸಮಾಜ ಕಲ್ಯಾಣ ಇಲಾಖೆ ಇವರು ನೀಡಿರುವ ಅಭಿಪ್ರಾಯ ಅನುಸರಿಸಿ)

5. ಮೇಲ್ಕಾಣಿಸಿದ ಕ್ರಮ ಸಂಖ್ಯೆ 1 ರಿಂದ 4 ರಲ್ಲಿ ತಿಳಿಸಿರುವ ವರ್ಗದವರಿಗೆ ಆದ್ಯತೆ ನೀಡಿದ ನಂತರ ಬಾಕಿ ಉಳಿಯುವ ಖಾಲಿ ಹುದ್ದೆಗಳನ್ನು ಇತರೆ ವರ್ಗಗಳಿಂದ ಭರ್ತಿ ಮಾಡಬಹುದಾಗಿದೆ. (1 ರಿಂದ 4 ರಲ್ಲಿ ತಿಳಿಸಿರುವಂತಹ ಅಭ್ಯರ್ಥಿಗಳು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ದೃಢೀಕರಣ ಪಡೆದಿರಬೇಕು)

**ನೇಮಕಾತಿ ಷರತ್ತುಗಳು:**

1. ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ಕಾಯ್ದೆಯನ್ವಯ ವೇತನ ನಿಗದಿಪಡಿಸುವುದು ಹಾಗೂ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ಪರಿಷ್ಕರಿಸುವ ವೇತನವನ್ನು ಮತ್ತು ಪಿ.ಎಫ್ ಮತ್ತು ಇ.ಎಸ್.ಐ ಸೌಲಭ್ಯವನ್ನು ಕಲ್ಪಿಸುವುದು.
2. ನೇರಪಾವತಿಯಡಿ ಆಯ್ಕೆಗೊಂಡ ಪೌರಕಾರ್ಮಿಕರು ತಾತ್ಕಾಲಿಕವಾಗಿ ನೇಮಕವಾಗಿದ್ದು ಖಾಯಂ ನೌಕರರಿಗೆ ನೀಡುವಂತಹ ಇತರೇ ಯಾವುದೇ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ ಮತ್ತು ವ್ಯಕ್ತಿಗತವಾಗಿ ಅಥವಾ ಸಂಘಗಳನ್ನು ಸ್ಥಾಪಿಸಿಕೊಂಡು ಖಾಯಂ ಮಾಡುವಂತೆ ಒತ್ತಾಯಿಸುವಂತಿಲ್ಲ ಹಾಗೂ ಖಾಯಂ ಮಾಡುವಂತೆ ಯಾವುದೇ ನ್ಯಾಯಾಲಯದ ಮೊರೆ ಹೋಗುವುದಕ್ಕೆ ಆಸ್ಪದವಿರುವುದಿಲ್ಲ. **(ಈ ಕುರಿತು ಆಯ್ಕೆಗೊಂಡ ಅಭ್ಯರ್ಥಿಗಳಿಂದ Notary Affidavit ಕಡ್ಡಾಯವಾಗಿ ಪಡೆಯತಕ್ಕದ್ದು).**
3. ನೇರಪಾವತಿಗೆ ಆಯ್ಕೆಯಾಗುವವರು ಆರೋಗ್ಯವಂತರಾಗಿರಬೇಕು ಯಾವುದೇ ಕಾಯಿಲೆಗಳಿಂದ ಬಳಲುತ್ತಿರುವವರಾಗಿರಬಾರದು. ಈ ಕುರಿತು ವೈದ್ಯಾಧಿಕಾರಿಗಳಿಂದ ವೈದ್ಯಕೀಯ ದೃಢೀಕರಣ ಪತ್ರ ಪಡೆಯತಕ್ಕದ್ದು.
4. ನೇರ ಪಾವತಿಯಡಿ ಆಯ್ಕೆ ಹೊಂದಿರುವವರು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಮೃತರಾದಲ್ಲಿ, ಅನುಕಂಪ ನೇಮಕಾತಿ, ಪಿಂಚಣಿ, ಉಪದಾನ, ಇತ್ಯಾದಿ ಯಾವುದೇ ಸೇವಾ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
5. ನೇರಪಾವತಿಯಡಿ ಆಯ್ಕೆ ಹೊಂದಿರುವ ಪೌರಕಾರ್ಮಿಕರು, ಸ್ವಚ್ಛತಾ ಕೆಲಸವನ್ನೇ ನಿರ್ವಹಿಸಬೇಕು. ಅದಲ್ಲದೇ ಇತರೆ ಯಾವುದೇ ಕೆಲಸಕ್ಕೆ ಅಥವಾ ಕಚೇರಿ ಕೆಲಸಗಳಿಗೆ ನಿರ್ವಹಿಸುವಂತಿಲ್ಲ/ನಿಯೋಜಿಸುವಂತಿಲ್ಲ.
6. ನೇರಪಾವತಿಯಡಿ ಆಯ್ಕೆಗೊಂಡವರುಗಳ ಹೊರತು, ಸದರಿಯವರ ಹೆಸರಿನಲ್ಲಿ ಯಾವುದೇ ಸಂದರ್ಭದಲ್ಲಿಯೂ ಬೇರೊಬ್ಬರು ಕರ್ತವ್ಯ ನಿರ್ವಹಿಸುವಂತಿಲ್ಲ.
7. ನೇರಪಾವತಿಯಡಿ ಆಯ್ಕೆಗೊಂಡವರು ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದಲ್ಲಿ ಅಥವಾ ಕಛೇರಿ ಮುಖ್ಯಸ್ಥರು ನೀಡುವ ಸೂಚನೆ ಮತ್ತು ಸಲಹೆಗಳನ್ನು ಪಾಲಿಸದೇ ಇದ್ದಲ್ಲಿ, ಸಂಬಂಧಿಸಿದ ಆಯುಕ್ತರು/ಪೌರಾಯುಕ್ತರು ಯಾವುದೇ ಮೂನ್ಸೂಚನೆ ನೀಡದೇ ಸದರಿಯವರುಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಕ್ರಮಕೈಗೊಳ್ಳುವುದು.
8. ನೇರಪಾವತಿಯಡಿ ಆಯ್ಕೆಗೊಂಡಿರುವ ನೌಕರರು ಸರ್ಕಾರದಿಂದ, ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆಗಳಿಗೆ ಬದ್ಧರಾಗಿರತಕ್ಕದ್ದು. **(ಈ ಕುರಿತು ಆಯ್ಕೆಗೊಂಡ ಅಭ್ಯರ್ಥಿಗಳಿಂದ Notary Affidavit ಕಡ್ಡಾಯವಾಗಿ ಪಡೆಯತಕ್ಕದ್ದು).**

**ವಿಶೇಷ ಸೂಚನೆ:**

ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ಚಿಕ್ಕಬಳ್ಳಾಪುರ ಜಿಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಕೆಳಕಂಡ ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಿದೆ.

ನಗರಸಭೆ, ಚಿಕ್ಕಬಳ್ಳಾಪುರ- http://www.chikkaballapurcity.mrc.gov.in/

ನಗರಸಭೆ, ಚಿಂತಾಮಣಿ- http://www.chintamanicity.mrc.gov.in/

ನಗರಸಭೆ, ಶಿಡ್ಲಘಟ್ಟ http://www.shidlaghattacity.mrc.gov.in/

ನಗರಸಭೆ, ಗೌರಿಬಿದನೂರು http://www.gowribidanurcity.mrc.gov.in/

ಅಧ್ಯಕ್ಷರು
ನೇಮಕಾತಿ ಸಮಿತಿ
ಹಾಗೂ ಜಿಲ್ಲಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ.